


ತಾನು ಇಷ್ಟಪಟ್ಟ ವಿವಾಹ, ಪತಿ ತೀರಿದಾಗ ಸತಿ ಹೋಗದಿರುವಿಕೆ, ರಾಜನಿಲ್ಲದೆ ರಾಜ್ಯ ಅನಾಥವಾದಾಗ ಧೃತಿಗೆಡದೆ ರಾಜಕುಮಾರನನ್ನು ಆಯ್ಕೆ ಮಾಡುವುದು, ಗುರು ಸಾನ್ನಿಧ್ಯ, ಮಠದ ಒಡನಾಟ, ಹೊನ್ನವ್ವಳೊಂದಿಗಿನ ಆಪ್ತತೆಯ ಕ್ಷಣಗಳು – ಇತ್ಯಾದಿಗಳು ಮನಸ್ಸಿನ ಮೇಲೆ ಆಳವಾದ ಪರಿಣಾಮ ಬೀರುತ್ತವೆ. ನೆತ್ತರನ್ನು ಕುದಿಸುವಷ್ಟು ಪ್ರಭಾವಿಸುವ ತರಾಸು ಅವರ ಸುಲಭ ಭಾಷೆ, ಅನುಭವ ಚಿಂತನೆಗಳ ರಸಪಾಕ ಕಾದಂಬರಿಯನ್ನು ಯಾರೇ ಓದಿದರೂ ಮಣ್ಣಿನ ಮೇಲಿನ ಅಭಿಮಾನ ಹೆಚ್ಚಿಸುವುದು ಮಾತ್ರವಲ್ಲ, ಓಬವ್ವ ನಾಗತಿ ನಮ್ಮ ಹೃದಯದ ನಿತ್ಯ ನಿವಾಸಿಯಾಗುತ್ತಾರೆ, ನನಗಾಗಿರುವುದೂ ಹಾಗೆಯೇ.

ಆನೆಗೊಂದಿಯ ರಾಯ ವೆಂಕಟಪ್ಪ ನಾಯಕನ ಪುತ್ರಿ ಓಬವ್ವ ನಾಗತಿ. ಆನೆಗುಂದಿ ರಾಯರ ಪತ್ನಿ. ದುರ್ಗದ ಅಡುಗೆ ಮನೆ ಕರಿಯವ್ವ ನಾಗತಿಯ ಪುತ್ರಿ. ಓಬವ್ವಳಿಗೆ ಸೋದರ ಮಾವನ ಮನೆ ಈ ದುರ್ಗ. ಮುಂದೆ ಆಕೆಯೇ ದುರ್ಗದ ಸೊಸೆಯಾಗುತ್ತಾಳೆ.

ಹನುಮಮ್ಮ ನಾಗತಿ ಚಿತ್ರದುರ್ಗದ ಹಿರಿಯ ಸೊಸೆ. ನಂತರ 50ಕ್ಕೂ ಹೆಚ್ಚು ನಾಗತಿಯರು ಕಥೆಯ ಹಂದರದಲ್ಲಿ ಬಂದುಹೋಗಿದ್ದಾರೆ. ಅವರ ಪೈಕಿ ಕನಕವ್ವ ನಾಗತಿ ಬಿಚ್ಚುಗತ್ತಿ ಭರಮಣ್ಣ ನಾಯಕರ ತಾಯಿ. ಇವರ ಪುತ್ರನೇ ಹಿರೇಮದಕರಿ ನಾಯಕ, ಓಬವ್ವನ ಪತಿ.

ಓಬವ್ವ ನಾಗತಿಯ ಹುಟ್ಟು, ರಾಯನ ವ್ಯಕ್ತಿತ್ವ ಬದಲಾಯಿಸುತ್ತದೆ. ತಾಯಿ ದೇವಮ್ಮ ನಾಗತಿ ಮಗಳನ್ನು ಮುಕ್ತವಾಗಿ ಬೆಳೆಸುತ್ತಿದ್ದಳು. ಅದರಲ್ಲೂ ಅಪ್ಪಯ್ಯನೆಂದರೆ ಓಬವ್ವ ನಾಗತಿಗೆ ಬಹಳ ಗೌರವ. ರಾಯನೂ ಅಷ್ಟೇ, ಪುಟ್ಟ ನಾಗತಿಯನ್ನು ಹೆಗಲಿನಿಂದ ಇಳಿಸುತ್ತಿರಲಿಲ್ಲ. ಪುತ್ರಿಯನ್ನು 'ಗಂಡೋಬವ್ವ' ಎಂದದ್ದು ಅಪ್ಪಯ್ಯನೇ.

ಅಕ್ಷರಾಭ್ಯಾಸದ ಜೊತೆಗೆ ಓಬವ್ವ ನಾಗತಿ ಕುದುರೆ ಸವಾರಿ, ಕತ್ತಿವರಸೆ ಮುಂತಾದ ವೀರೋಚಿತ ಕ್ಷತ್ರಿಯ ವಿದ್ಯೆಗಳನ್ನು ಸಮರ್ಥವಾಗಿ ಕಲಿತು ತಂದೆಯೊಡನೆ ಶತ್ರುಗಳ ಜೊತೆ ಬೆರಗುಗೊಳಿಸುವಂತೆ ಹೋರಾಡುತ್ತಿದ್ದಳು. ಪುತ್ರಿ ಒಬ್ಬಳಿದ್ದರೆ ಸಾಕು, ಎಂಥವರನ್ನೂ ಬಗ್ಗು ಬಡಿಯುತ್ತೇನೆ ಎಂದು ರಾಯ